ನಾಂದಿನುಡಿ

# ಪ್ರೇಮಕಥೆಗಳ ಬರ

ಬೇಸರದ ಕ್ಷಣಗಳಲ್ಲಿ ಜೀವಕ್ಕೆ ಹಿತಕೊಡುವ ಸಂಗತಿಗಳು ಹಲವು. ಕೆಲವರಿಗೆ ಸಂಗೀತ, ಸಿನಿಮಾ, ಆಟಗಳು ಮನರಂಜಿಸಿದರೆ, ಎಲ್ಲೋ ಕೆಲವರಿಗೆ ಹೂಹಗುರ ಕಥೆಗಳ, ಅದರಲ್ಲೂ ಪ್ರೇಮಕಥೆಗಳ ಓದು ಉಲ್ಲಾಸವನ್ನು ಮರಳಿ ತರಬಹುದು. ಮರುಳುಗೊಳಿಸುವ ಆ ಪ್ರೇಮಕಥೆಗಳು ಯಾವತ್ತೋ ಕಳೆದುಹೋಗಿವೆ. ಎಲ್ಲ ಕಾಲದವರನ್ನು ಮುದಗೊಳಿಸುವ ಪ್ರೇಮಕಥೆಗಳೇ ಕನ್ನಡದಲ್ಲಿ ಇಲ್ಲವೇನೊ? ಇದ್ದರೂ ಭಾವನಾತ್ಮಕತೆಯ ತೆಳುಸಿಹಿಯನ್ನು ಸವರಿದ, ಭ್ರಮೆಗಳಿಗೆ ದೂಡುವ ಕಥೆ, ಕಾದಂಬರಿಗಳು ಮಾತ್ರ. ಅಂತಹ ಜನಪ್ರಿಯ ಬರಹಗಳಲ್ಲಿ ಸೀರೆ ಉಟ್ಟು, ಮುಡಿ ತುಂಬ ಹೂಮುಡಿದ, ಕಿರುನಗೆಯ ಸಾಂಪ್ರದಾಯಿಕ ಚೆಲುವೆಯರಿದ್ದರು; ತೆಳ್ಳಗೆ ಬೆಳ್ಳಗೆ ಇದ್ದ ಅವರಿಗೆ ನಟ ಅಂಬರೀಷ್ ತರಹದ ಹುಡುಗರು ಲೈನು ಹೊಡೆಯುತ್ತಿದ್ದರು. ನಮ್ಮ ಜನಪ್ರಿಯ ಬರಹಗಾರರ ಕಾದಂಬರಿ, ಕಥೆಗಳಲ್ಲಿ ಪ್ರೇಮಿಸುವ ಪಾತ್ರಗಳು ಈ ರೀತಿಯವು. ಮುಟ್ಟಿದರೆ ಬಾಡುವ ಈ ಯಾವ ಪಾತ್ರಗಳಿಗೂ ಒಂದು ವ್ಯಕ್ತಿತ್ವವೇ ಇರಲಿಲ್ಲ. ಸೀಮಿತ ಆವರಣ, ಕೃತಕ ನುಡಿ, ವರ್ಣನೆಗಳಿಂದ ಕೂಡಿದ, ಮಧ್ಯಮವರ್ಗದ ಚಿತ್ರಣವಿದ್ದ ಉಷಾ, ಚಿತ್ರಾ, ನೀಳಾ ಮತ್ತಿತರರ ಬರಹಗಳು ಎಷ್ಟು ಬೇಗ ಜನಪ್ರಿಯವಾದವೋ ಅಷ್ಟೇ ಅವಸರದಲ್ಲಿ ಕಣ್ಮರೆಯಾದವು. ಒಂದೇ ಓದಿಗೆ ಅವುಗಳ ಕಥೆ ಮುಗಿದಿತ್ತು. ಈಗಿನ ಹುಡುಗ, ಹುಡುಗಿಯರ ತನಕ ಅವು ಬಂದು ಮುಟ್ಟಲೇ ಇಲ್ಲ. ಅನಂತವಾಗಿರುವ ಕಾಲದಲ್ಲಿ ಬಹುದೂರ ಚಲಿಸುವ ಶಕ್ತಿ ಆ ಬರಹಗಳಿಗಿರಲಿಲ್ಲ.

ಈಗಿನ ಹುಡುಗ, ಹುಡುಗಿಯರು ಮೊಬೈಲ್‌ನಲ್ಲಿ ಇಡೀ ದಿನ ಬಿಡುವಿಲ್ಲದಂತಿರುತ್ತಾರೆ. ಅದೇ ಅವರ ಪಾಠಶಾಲೆ, ಮನದನ್ನೆ, ಅರಸ ಎಲ್ಲ. ಅವರಿಗೆ ಪ್ರೇಮಪತ್ರ ಬರೆಯಲು ಪುರುಸೊತ್ತಿಲ್ಲ. ಏನಿದ್ದರೂ ಚುಟುಕಾದ ಮೇಘಸಂದೇಶ. ಅವರಿಗೆ ಸುದೀರ್ಘ ಪ್ರೇಮಪತ್ರ ಬರೆಯಲು ಬಾರದು. ಆ ಪತ್ರಗಳ ಮಾದರಿಗಳು ಹುಡುಗರಿಗೆ ಗೊತ್ತೇ ಇಲ್ಲ. ಸಿನಿಗೀತೆಗಳ ಶೈಲಿಯಲ್ಲಿ ಒಂದಷ್ಟು ಮಾತುಗಳನ್ನು ಮೊಬೈಲ್‌ನಲ್ಲಿ ಬರೆಯುವುದುಂಟು. ಹೀಗಿರುವಾಗ ಪ್ರೇಮಕಥೆಗಳು ಹುಟ್ಟುವುದಾದರೂ ಹೇಗೆ? ಲೇಖಕನ ಕ್ರಿಯಾಶೀಲತೆಗೆ ಸವಾಲು ಇರುವುದೇ ಪ್ರೇಮಕಥೆ, ಕವಿತೆಗಳನ್ನು ಸೃಷ್ಟಿಸುವಲ್ಲಿ. ಕನ್ನಡದಲ್ಲಂತೂ ಈ ರಮ್ಯಕಥಾನಕಗಳು ಎಂದಿನಿಂದಲೂ ಕಡಿಮೆಯೇ. ನಮ್ಮಲ್ಲಿ ದಾಂಪತ್ಯಕ್ಕೆ ಕೊಟ್ಟಷ್ಟು ಮಹತ್ವವನ್ನು ಪ್ರೇಮಕ್ಕೆ ಕೊಟ್ಟಿಲ್ಲ. ಆದ್ದರಿಂದಲೇ ಪ್ರೇಮದಲ್ಲಿ ತೊಡಗಿದ ದೇವತೆಗಳು ಇಲ್ಲಿ ಸಿಗಬಹುದಾದರೂ ಪ್ರೀತಿಗೇ ಮೀಸಲಾದ ಒಂದು ದೇವರಿಲ್ಲ! ಪ್ರೀತಿಗೆ ದೇವರ ಗೊಡವೆ ಬೇಡ ಎಂಬ ಜಾಣ ಯೋಚನೆ ಇದರ ಹಿಂದೆ ಇದ್ದಂತಿದೆ.

ಕನ್ನಡದಲ್ಲಿ ಪ್ರೇಮಕಥೆಗಳ ಕೊರತೆ ಎಂದಿನಿಂದಲೂ ಇದೆ. ನೀತಿ, ಅನೀತಿಯ ಗೆರೆಗಳನ್ನು ದಾಟಿದ, ಅಪ್ಪಟ ಮಾನವೀಯ ಚಟುವಟಿಕೆಯಾದ ಪ್ರೀತಿಯನ್ನು ಶೋಧಿಸುವ ಕಥೆಗಳು ನಮ್ಮಲ್ಲಿ ಅಪರೂಪ. ಆ ಜಾಗ ತುಂಬಲಾಗದಷ್ಟು ಖಾಲಿ ಇದೆ. ಓದುಗರನ್ನು ಖುಷಿಗೊಳಿಸುವ, ಚಕಿತಗೊಳಿಸಿ ನಸುಕಂಪನಕ್ಕೆ ಈಡು ಮಾಡುವ ಅಂತಹ ಕಥೆಗಳು ಈಗಲೂ ಬೇಕು. ಕಡೆಯ ಪಕ್ಷ ಕೂಗುಮಾರಿ ಟೀವಿ, ವಾಟ್ಸ್‌ಆ್ಯಪ್, ಫೇಸ್‌ಬುಕ್‌ಗಳಿಂದ ನಮ್ಮನ್ನು ಬಿಡುಗಡೆ ಮಾಡಿ ಹಗುರಗೊಳಿಸಲಾದರೂ!

'ಮಯೂರ' ಪ್ರೇಮಕಥೆಗಳನ್ನು ಸ್ವಾಗತಿಸುತ್ತದೆ.

**ಸಂದೀಪ ನಾಯಕ**

